**ಕನ್ನಡ ಸೌರಭ, ಸಂಪುಟ 2, ಸಂಚಿಕೆ ೨, ಮೇ, 2018**

# ಕನ್ನಡದ ಅಸ್ಮಿತೆ ಉಳಿಯುವಿಕೆಗೆ ನೆರವಾಗಬಲ್ಲವೇ ಕನ್ನಡದ ತಂತ್ರಾಶಗಳು?

ಡಿಜಿಟಲ್ ಇಂಡಿಯ, ಮೇಕ್ ಇನ್ ಇಂಡಿಯ ಪದಗಳು ಇತ್ತೀಚಿನ ದಿನಗಳಲ್ಲಿ ಬಹಳ ಶಬ್ದ ಮಾಡುತ್ತಿರುವ ಪದಗಳು. ಬಹುಪಾಲು ಸಂಸ್ಥೆಗಳು ಡಿಜಿಟಲೀಕರಣಗೊಳ್ಳುತ್ತಿರುವ ಈ ಸಮಯದಲ್ಲಿ ಆಂಗ್ಲ ಭಾಷಾಧಾರಿತ ತಂತ್ರಾಂಶಗಳನ್ನು ಅವಲಂಬಿಸುತ್ತಿವೆ. ಕನ್ನಡ ಶಾಲೆಗಳು ಕಣ್ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ಕನ್ನಡ ಮಾಧ್ಯದಲ್ಲಿ ಓದಿದ ವಿದ್ಯಾರ್ಥಿಗಳಿಗೆ ತಮ್ಮ ನೌಕರಿಯ ಕುರಿತು ಆತಂಕ ತಾರಕಕ್ಕೇರುವುದು ಸಹಜವೇ. ಈ ನಿಟ್ಟಿನಲ್ಲಿ ನಮ್ಮನ್ನಾಳುವ ವರ್ಗ ಕನ್ನಡದಲ್ಲಿ ಓದಿದವರ ಮತ್ತು ಓದುತ್ತಿರುವವರ ಕುರಿತು ಕಾಳಜಿ ವಹಿಸುತ್ತವೆ ಎನ್ನುವ ಆಶಾಭಾವ ಆಸೆಯಾಗಿ ಉಳಿಯುವುದೇನೋ ಎನ್ನುವ ಆತಂಕ ಇದ್ದೇ ಇರುವುದು. ಭಾರತವು ಮುಕ್ತ ವ್ಯಾಪಾರಕ್ಕೆ ತನ್ನನ್ನು ತೆರೆದುಕೊಂಡಿರುವುದರಿಂದ ಹಲವು ಬಹುರಾಷ್ಟ್ರೀಯ ಸಂಸ್ಥೆಗಳು ಇಲ್ಲಿ ಸ್ಥಾಪಿತಗೊಂಡು ಅವಕಾಶಗಳನ್ನೇನೋ ಒದಗಿಸಿವೆ. ಆದರೆ ಅವು ತಮ್ಮ ವ್ಯಾಪಾರ ವಹಿವಾಟಿಗಾಗಿ ಆಂಗ್ಲ ಭಾಷಾಧಾರಿತ ತಂತ್ರಾಂಶಗಳನ್ನು/ಉಪಕರಣಗಳನ್ನು ಅವಲಂಬಿಸಿದಾಗ ಕೆಲಸದ ಅವಕಾಶಗಳು ಆಂಗ್ಲ ಭಾಷೆ ಕಲಿತ ವರ್ಗಕ್ಕೆ ಮಾತ್ರ ಸೀಮಿತವಾಗುವವು. ಅವುಗಳನ್ನು ಬಳಸಬೇಕಾದ ಕಾರ್ಮಿಕ ವರ್ಗ ಪ್ರಾಂತೀಯ ಭಾಷೆಯಲ್ಲಿ (ಕರ್ನಾಟಕದಲ್ಲಿ ಕನ್ನಡ) ಓದಿದ್ದರೆ ಆಂಗ್ಲ ಭಾಷೆಯನ್ನು ಹೊಸದಾಗಿ ಅರಗಿಸಿಕೊಂಡು ತಂತ್ರಾಂಶದ ಬಳಕೆ ಕಲಿಯುವ ಒತ್ತಡಕ್ಕೆ ಸಿಲುಕುವುದು. ಇಂತಹ ಸನ್ನಿವೇಶಗಳಲ್ಲಿ ಈ ತಂತ್ರಾಂಶಗಳು ಸ್ಥಳೀಯ ಭಾಷೆಯಲ್ಲಿ ಇದ್ದಾಗ ಈ ಸ್ಥರದ ಕಾರ್ಮಿಕ ವರ್ಗವು ನಿರಾಳವಾಗಿ ಕೆಲಸ ನಿರ್ವಹಿಸುವುದು ಸಾಧ್ಯ. ಈ ನಿಟ್ಟಿನಲ್ಲಿ ಕೆಲ ಬಹುರಾಷ್ಟ್ರೀಯ ಸಂಸ್ಥೆಗಳು ಕನ್ನಡ ತಂತ್ರಾಂಶ ಬಳಸಿ ತಮ್ಮ ವಹಿವಾಟಿನ ಅಭಿವೃದ್ಧಿಯಲ್ಲಿ ತೊಡಗಿರುವುದು ಮತ್ತು ಕೆಲ ಸಂಸ್ಥೆಗಳು ಈಗಾಗಲೇ ಬಳಸುತ್ತಿರುವುದು ಶ್ಲಾಘನೀಯ. ಇತ್ತೀಚಿನ ಕೆಲ ಉದಾಹರಣೆಗಳೆಂದರೆ ಎಂದರೆ ಇ–ಕಾಮರ್ಸ್ ದೈತ್ಯ ಅಮೆಜಾನ್, ಸಂವಹನ ಕ್ಷೇತ್ರದ ಏರ್‌ಟೆಲ್, ಐಡಿಯಾ, ಮುಂತಾದ ಸಂಸ್ಥೆಗಳು ನಮ್ಮ ಕನ್ನಡದ ತಂತ್ರಜ್ಞ ಶ್ರೀ ಉದಯ ಶಂಕರ ಪುರಾಣಿಕರೊಡಗೂಡಿ ತಂತ್ರಾಂಶ ಅಭಿವೃದ್ಧಿಪಡಿಸಿ ಬಳಸುತ್ತಿವೆ. ಇಂತಹ ತಂತ್ರಾಂಶಗಳು ದೂರವಾಣಿಯಲ್ಲಿ ಬರುವ ಒಳಕರೆಗಳ ಕನ್ನಡ ಭಾಷೆಯನ್ನು ಗುರುತಿಸಿ ಕರೆಗಳನ್ನು ಕನ್ನಡದ ನಿರ್ವಾಹಕನ ಡೆಸ್ಕಟಾಪ್‌ಗೇ ನಿರ್ದೇಶಿಸುತ್ತವೆ. ಕೆಲ ಸ್ವಯಂಚಾಲಿತ ಯಂತ್ರಗಳಲ್ಲಿ ಇಂತಹ ತಂತ್ರಾಶಗಳನ್ನು ಅಳವಡಿಸಿಕೊಂಡು ಎಸ್ ಎಂ ಎಸ್ / ಇ – ಅಂಚೆಗಳನ್ನು ಕೂಡಾ ಕಳುಹಿಸಬಹುದಾಗಿದೆ. ಇಂತಹ ತಂತ್ರಾಂಶ ಇಲ್ಲದೇ ಇರುವ ಸಂದರ್ಭಗಳಲ್ಲಿ ಗ್ರಾಹಕನಿಗೆ ಕನ್ನಡ ಮಾತ್ರ ಗೊತ್ತಿರುವಾಗ ಆಂಗ್ಲ ಅಥವಾ ಇನ್ನಿತರೆ ಭಾಷೆಯಲ್ಲಿ ವ್ಯವಹರಿಸುವ ನಿರ್ವಾಹಕನಿದ್ದರೆ ಸರಿಯಾದ ಸಂವಹನ ಸಾಧ್ಯವಿರುವುದಿಲ್ಲ. ಗ್ರಾಹಕ ತನ್ನ ಸಮಸ್ಯೆಯನ್ನು ಹೇಳಿಕೊಳ್ಳಲು ಸಮಸ್ಯೆಯಾಗುವುದು. ಕನ್ನಡ ಭಾಷೆಯನ್ನು ಗುರುತಿಸಿ ಕರೆಗಳನ್ನು ಕನ್ನಡದ ನಿರ್ವಾಹಕನ ಡೆಸ್ಕಟಾಪ್‌ಗೇ ನಿರ್ದೇಶಿಸುವ ತಂತ್ರಾಂಶಗಳನ್ನು ಅಳವಡಿಸಿಕೊಂಡರೆ ಗ್ರಾಹಕನ ತೊಂದರೆಗಳನ್ನು ಸುಲಭವಾಗಿ ನಿವಾರಿಸಬಹುದು. ಹಲವು ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ತಂತ್ರಾಂಶಗಳನ್ನು ಅಳವಡಿಸಿಕೊಂಡಿತುವುದರಿಂದ ಹಲವಾರು ಕನ್ನಡಿಗರಿಗೆ ಕೆಲಸ ದೊರೆತಿರುವುದೂ ನಿಜ. ಇಂತಹ ಪ್ರಯತ್ನವನ್ನು ಎಲ್ಲಾ ಸಂಸ್ಥೆಗಳು ಮಾಡಿದಲ್ಲಿ ತಮ್ಮ ಗ್ರಾಹಕರನ್ನು ಸಂತೃಪ್ತಿಗೊಳಿಸಬಹುದು ಮತ್ತು ಹೆಚ್ಚು ಹೆಚ್ಚು ಸ್ಥಳೀಯರಿಗೆ ಕೆಲಸ ಸಿಗುವುದು. ಇಂತಹ ಕೆಲಸಗಳು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಸ್ಮಿತೆ ಉಳಿಸಿ ಬೆಳೆಸುವಲ್ಲಿ ಸಹಕಾರಿಯಾಗಬಲ್ಲದು ಕೂಡಾ. ಇಂತಹ ಪ್ರಯತ್ನಗಳು ಕನ್ನಡ ಮಾಧ್ಯಮದಲ್ಲಿ ಓದಿ ಬೆಳೆದ ಶ್ರಮಿಕ ವರ್ಗವನ್ನು ಸಮಾಜದ ಮುಖ್ಯವಾಹಿನಿಗೆ ತಂದು ನಿಲ್ಲಿಸಲು ಸಹಕಾರಿಯಾಗಬಲ್ಲವು. ಹಾಗೆಯೇ ಕಾಲೇಜು, ವಿಶ್ವವಿದ್ಯಾಲಗಳಲ್ಲಿ ಓದುತ್ತಿರುವ ಇಂಜಿನಿಯರಿಂಗ್ ವಿದ್ಯಾರ್ಥಿಗಳು ವ್ಯಾಪಾರ ವಹಿವಾಟುಗಳಲ್ಲಿ ಜನಸಾಮಾನ್ಯರಿಗೆ ಸಹಕಾರಿಯಾಗಬಲ್ಲ ಪ್ರಾಂತೀಯ ಭಾಷೆಗಳ ತಂತ್ರಾಂಶ ಅಭಿವೃದ್ಧಿಗೊಳಿಸುವುದನ್ನು ಛಲವಾಗಿ ಮತ್ತು ಅವಕಾಶವಾಗಿ ಬಳಸಿಕೊಂಡರೆ ಕನ್ನಡ ಉಳಿಯಲು ಮತ್ತು ಬೆಳೆಯಲು, ನಮ್ಮ ಭಾಷೆ ಮತ್ತು ಸಂಸ್ಕೃತಿಗೆ ನೀಡುವ ಬಹು ದೊಡ್ಡ ಕೊಡುಗೆ.

**ಟಿ. ನಿರಂಜನಪ್ರಭು**